(3) (ಹೋಟೆಲಿನ ನಿಯೋಜಿತನಾಗಿರದ) ಹೋಟೆಲಿನಲ್ಲಿ ಯಾವನೇ ವ್ಯಕ್ತಿಗೆ ಒದಗಿಸಿದ ಭೋಗವಸ್ತುವಿಗೆ ಚಾರ್ಜು ಮಾಡದಿರುವಲ್ಲಿ ಅಥವಾ ರಿಯಾಯಿತಿ ದರದಲ್ಲಿ ಚಾರ್ಜು ಮಾಡಿರುವಲ್ಲಿ ಆಗ ಅಂತ ಭೋಗವಸ್ತುವಿನ ಮೇಲಿನ ತೆರಿಗೆಯನ್ನು ಅಂಥ ಭೋಗ ವಸ್ತುವಿಗಾಗಿ ಪೂರ್ಣ ಚಾರ್ಜುಗಳನ್ನು ಮಾಡಿದ್ದಿದ್ದರೆ ಹೇಗೋ ಹಾಗೆ ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು.

XX XX XX

12ಎ. ತೆರಿಗೆ ವಿನಾಯಿತಿ ನೀಡಲು ಅಥವಾ ಕಡಿಮೆ ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರ.– ರಾಜ್ಯ ಸರ್ಕಾರವು, ನಿರ್ದಿಷ್ಟ ವರ್ಗದ ಹೋಟೆಲ್‌ಗಳ ಅಥವಾ ನಿರ್ದಿಷ್ಟ ವರ್ಗದ ದಾಸ್ತಾನುದಾರರ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಗೆ ವಿನಾಯಿತಿ ನೀಡುವುದು ಅಥವಾ ಅದನ್ನು ಕಡಿಮೆ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವೆಂದು ಅಭಿಪ್ರಾಯಪಟ್ಟರೆ, ಅಧಿಸೂಚನೆಯ ಮೂಲಕ ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಮತ್ತು ನಿರ್ದಿಷ್ಟಪಡಿಸಬಹುದಾದಂಥ ಅವಧಿಗೆ ಒಳಪಟ್ಟು ಹಾಗೆ ಮಾಡಬಹುದು.

XX XX XX

ಅನುಬಂಧ – 4

ಕರ್ನಾಟಕದ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ
(ಮುಂದುವರೆದ ಉಪವೇಶನಗಳು)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 23)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 35) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನುಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು 2009ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಅನುಸೂಚಿಯ ತಿದ್ದುಪಡಿ.– ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ರಲ್ಲಿ (1957ರ ಕರ್ನಾಟಕ ಅಧಿನಿಯಮ 35), ಅನುಸೂಚಿಯಲ್ಲಿ,

ಎ–1 ಭಾಗಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಭಾಗ ಎ1

[3(1)ನೇ ಪ್ರಕರಣ ನೋಡಿ]

ದ್ವಿಚಕ್ರ ವಾಹನಗಳಿಗೆ ಆಜೀವ ತೆರಿಗೆ

ಕ್ರಮ ಸಂಖ್ಯೆ	ವಾಹನಗಳ ವರ್ಗ	ರೂ.50000ಕ್ಕೆ ಮೀರಿರದ ಬೆಲೆಯ ಮೋಟಾರು ಸೈಕಲ್ಲುಗಳು	ರೂ.50000ಕ್ಕೆ ಮೀರಿದ ಬೆಲೆಯ ಮೋಟಾರು ಸೈಕಲ್ಲುಗಳು	ವಿದ್ಯುಚ್ಛಕ್ತಿಯಿಂದ ಓಡುವ ಮೋಟಾರು ಸೈಕಲ್ಲುಗಳು
ಎ.	ಹೊಸ ವಾಹನಗಳ ನೊಂದಣಿಯ ಸಮಯದಲ್ಲಿ	ವಾಹನದ ಬೆಲೆಯ ಶೇಕಡ 8	ವಾಹನದ ಬೆಲೆಯ ಶೇಕಡ 10	ವಾಹನದ ಬೆಲೆಯ ಶೇಕಡ 4
ಬಿ.	ವಾಹನವು ಈಗಾಗಲೇ ನೋಂದಣಿಯಾಗಿದ್ದು ಮತ್ತು ನೋಂದಣಿಯ ತಿಂಗಳಿನಿಂದ ಅದರ ವಯಸ್ಸು	ಎ ಖಂಡದಡಿಯಲ್ಲಿ ವಿಧಿಸುವ ಶೇಕಡವಾರು ಆಜೀವ ತೆರಿಗೆ	ಎ ಖಂಡದಡಿಯಲ್ಲಿ ವಿಧಿಸುವ ಶೇಕಡಾವಾರು ಆಜೀವ ತೆರಿಗೆ	ಎ ಖಂಡದಡಿಯಲ್ಲಿ ವಿಧಿಸುವ ಶೇಕಡಾವಾರು ಆಜೀವ ತೆರಿಗೆ
1.	2 ವರ್ಷಗಳು ಮೀರಿರದಿದ್ದಲ್ಲಿ	93%	93%	93%
2.	2 ವರ್ಷಗಳು ಮೀರಿದ್ದು ಆದರೆ 3 ವರ್ಷಗಳು ಮೀರಿರದಿದ್ದಲ್ಲಿ	87%	87%	87%
3.	3 ವರ್ಷಗಳು ಮೀರಿದ್ದು ಆದರೆ 4 ವರ್ಷಗಳು ಮೀರಿರದಿದ್ದಲ್ಲಿ	81%	81%	81%
4.	4 ವರ್ಷಗಳು	75%	75%	75%

	ಮೀರಿದ್ದು ಆದರೆ 5 ವರ್ಷಗಳು ಮೀರಿರದಿದ್ದಲ್ಲಿ			
5.	5 ವರ್ಷಗಳು ಮೀರಿದ್ದು ಆದರೆ 6 ವರ್ಷಗಳನ್ನು ಮೀರಿರದಿದ್ದಲ್ಲಿ	69%	69%	69%
6.	6 ವರ್ಷಗಳನ್ನು ಮೀರಿದ್ದು ಆದರೆ 7 ವರ್ಷಗಳು ಮೀರಿರದಿದ್ದಲ್ಲಿ	64%	64%	64%
7.	7 ವರ್ಷಗಳು ಮೀರಿದ್ದು ಆದರೆ 8 ವರ್ಷಗಳು ಮೀರಿರದಿದ್ದಲ್ಲಿ	59%	59%	59%
8.	8 ವರ್ಷಗಳು ಮೀರಿದ್ದು ಆದರೆ 9 ವರ್ಷಗಳು ಮೀರಿರದಿದ್ದಲ್ಲಿ	54%	54%	54%
9.	9 ವರ್ಷಗಳು ಮೀರಿದ್ದು ಆದರೆ 10 ವರ್ಷಗಳು ಮೀರಿರದಿದ್ದಲ್ಲಿ	49%	49%	49%
10.	10 ವರ್ಷಗಳು ಮೀರಿದ್ದು ಆದರೆ 11 ವರ್ಷಗಳು ಮೀರಿರದಿದ್ದಲ್ಲಿ	45%	45%	45%
11.	11 ವರ್ಷಗಳನ್ನು ಮೀರಿದ್ದು ಆದರೆ 12 ವರ್ಷಗಳನ್ನು ಮೀರಿರದಿದ್ದಲ್ಲಿ	41%	41%	41%
12.	12 ವರ್ಷಗಳನ್ನು ಮೀರಿದ್ದು ಆದರೆ 13 ವರ್ಷಗಳನ್ನುಮೀರಿರದಿದ್ದಲ್ಲಿ	37%	37%	37%

13.	13 ವರ್ಷಗಳನ್ನು ಮೀರಿದ್ದು ಆದರೆ 14 ವರ್ಷಗಳನ್ನು ಮೀರಿರದಿದ್ದಲ್ಲಿ	33%	33%	33%
14.	14 ವರ್ಷಗಳು ಮೀರಿದ್ದು ಆದರೆ 15 ವರ್ಷಗಳನ್ನು ಮೀರಿರದಿದ್ದಲ್ಲಿ	29%	29%	29%
15.	15 ವರ್ಷಗಳನ್ನು ಮೀರಿದ್ದಲ್ಲಿ	25%	25%	25%

ಟಿಪ್ಪಣಿಗಳು:

1. 2009ನೇ ಏಪ್ರಿಲ್ 1ನೇ ದಿನಾಂಕಕ್ಕೆ ಮೊದಲು ಆಜೀವ ತೆರಿಗೆಯು ಬಾಕಿಯಿದ್ದು, ಆದರೆ ಅದನ್ನು ಸಂದಾಯ ಮಾಡದಿದ್ದ ವಾಹನಗಳ ಸಂಬಂಧದಲ್ಲಿ, ಅಂಥ ತೆರಿಗೆಯನ್ನು, ಯಾವುದಾದರೂ ದಂಡವು ಬಾಕಿಯಿದ್ದರೆ, ಅದರ ಸಮೇತವಾಗಿ, ಅಂಥ ದಿನದ ಪೂರ್ವದಲ್ಲಿ ಚಾಲ್ತಿಯಲ್ಲಿದ್ದ ದರಗಳಲ್ಲಿ ಸಂಗ್ರಹಿಸತಕ್ಕದ್ದು.

2. ಒಂದು ಮೋಟಾರು ವಾಹನದ ಸಂಬಂಧದಲ್ಲಿ ವಾಹನದ ಬೆಲೆ ಎಂದರೆ.–

(ಎ) ಭಾರತದಲ್ಲಿ ತಯಾರಾದ ವಾಹನದ ಸಂಬಂಧದಲ್ಲಿ ವಾಹನದ ತಯಾರಕನಿಂದಾಗಲೀ ಅಥವಾ ವ್ಯಾಪಾರಿಯು ನೀಡಿದ, ಕರ್ನಾಟಕ ರಾಜ್ಯದಲ್ಲಿ ಸಂದಾಯ ಮಾಡತಕ್ಕ ಅಬಕಾರಿ ಸುಂಕ, ಮಾರಾಟ ತೆರಿಗೆ, ಅಧಿಕರ ಅಥವಾ ಉಪಕರ ಇವುಗಳನ್ನು ಒಳಗೊಂಡ ಖರೀದಿ ಪಟ್ಟಿಯನ್ವಯ ವಾಹನದ ಬೆಲೆ.

(ಬಿ) ಆಮದಾದ ಮೋಟಾರು ವಾಹನದ ಸಂಬಂಧದಲ್ಲಿ, ತಯಾರಾದ ಸ್ಥಳವನ್ನು ಗಣನೆಗೆ ತೆಗೆದುಕೊಳ್ಳದೇ, ಮೋಟಾರನ್ನು ಆಮದು ಮಾಡಿಕೊಳ್ಳುವಾಗ ಆಗುವ ಒಟ್ಟು ಬೆಲೆ, ಎಂದರೆ, ಆಮದು ರಫ್ತು ಸರಕುಗಳ ವಿವರಪಟ್ಟಿ ಅಥವಾ ಅಂಥ ಇತರ ದಾಖಲೆಯಲ್ಲಿ ಹಿಂಬರಹ ಮಾಡಿದಂತೆ ಮತ್ತು ಸೀಮಾ ಸುಂಕಗಳ ಅಧಿನಿಯಮ, 1962ರಡಿಯಲ್ಲಿ ಹಾಗೆ ಕರನಿರ್ಧರಣೆ ಮಾಡಲಾದ, ವಿಧಿಸಿದ ಸೀಮಾಸುಂಕ, ಮಾಡಿದ ಸಾಗಣೆ ಬಾಡಿಗೆಯ ವೆಚ್ಚಗಳು ಮತ್ತು ಸೀಮಾ ಸುಂಕಗಳ ಇಲಾಖೆಯಿಂದ ಅಥವಾ ಯಾವುದೇ ಇತರ ಇಲಾಖೆಯಿಂದ ವಿಧಿಸಿದ ಹೆಚ್ಚುವರಿ ಸುಂಕ/ದಂಡವು ಇದ್ದಲ್ಲಿ ಅವುಗಳನ್ನು ಒಳಗೊಂಡಂತೆ ವಿಧಿಸಿದ ಇತರ ತೆರಿಗೆಗಳ ಜೊತೆ, ಮೋಟಾರು ವಾಹನದ ಮೌಲ್ಯ.

ಎ5 ಭಾಗಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಭಾಗ ಎ5

[3(1)ನೇ ಪ್ರಕರಣ ನೋಡಿ]

ಮೋಟರು ಕಾರುಗಳು, ಜೀಪುಗಳು, ಓಮಿನಿ ಬಸ್ಸುಗಳು ಮತ್ತು ಖಾಸಗಿರು ಸೇವಾ ವಾಹನಗಳು

ಕ್ರಮ ಸಂಖ್ಯೆ	ಮೋಟಾರುಗಳ ವರ್ಗ	5 ಚದರ ಮೀಟರುಗಳವರೆಗೆ ನೆಲದ ವಿಸ್ತೀರ್ಣ ಹೊಂದಿರುವ 5 ಲಕ್ಷ ರೂಪಾಯಿಗಳು ಮೀರಿರದ ಬೆಲೆಯ ಮೋಟಾರು ಕಾರುಗಳು, ಜೀಪುಗಳು, ಆಮ್ನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳು	5 ಚದರ ಮೀಟರುಗಳವರೆಗೆ ನೆಲದ ವಿಸ್ತೀರ್ಣ ಹೊಂದಿರುವ 5 ಲಕ್ಷ ರೂಪಾಯಿಗಳು ಮೀರಿದ ಆದರೆ 00 ಲಕ್ಷ ರೂಪಾಯಿಗಳನ್ನು ಮೀರಿರದ ಬೆಲೆಯ ಮೋಟಾರು ಕಾರುಗಳು, ಜೀಪುಗಳು, ಆಮ್ನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳು	5 ಚದರ ಮೀಟರುಗಳವರೆಗೆ ನೆಲದ ವಿಸ್ತೀರ್ಣ ಹೊಂದಿರುವ, 10 ಲಕ್ಷ ರೂಪಾಯಿಗಳನ್ನು ಮೀರಿರದ ಬೆಲೆಯ ಮೋಟಾರು ಕಾರುಗಳು, ಜೀಪುಗಳು, ಆಮ್ನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳು	ವಿದ್ಯುಚ್ಛಕ್ತಿ ಯಿಂದ ಓಡುವ ಮೋಟಾರು ಕಾರುಗಳು
ಎ	ಹೊಸ ವಾಹನಗಳ ನೋಂದಣಿಯ ಸಮಯದಲ್ಲಿ	ವಾಹನದ ಬೆಲೆಯ ಶೇಕಡ 12	ವಾಹನದ ಬೆಲೆಯ ಶೇಕಡ 13	ವಾಹನದ ಬೆಲೆಯ ಶೇಕಡ 16	ವಾಹನದ ಬೆಲೆಯ ಶೇಕಡ 4
ಬಿ	ವಾಹನವು ಈಗಾಗಲೇ ನೋಂದಣಿಯಾಗಿದ್ದು ಮತ್ತು	ಎ ಖಂಡದ ಅಡಿಯಲ್ಲಿ ವಿಧಿಸಿದ ಶೇಕಡಾವಾರು ಆಜೀವ ತೆರಿಗೆ	ಎ ಖಂಡದ ಅಡಿಯಲ್ಲಿ ವಿಧಿಸಿದ ಶೇಕಡಾವಾರು ಆಜೀವ ತೆರಿಗೆ	ಎ ಖಂಡದ ಅಡಿಯಲ್ಲಿ ವಿಧಿಸಿದ ಶೇಕಡಾವಾರು ಆಜೀವ ತೆರಿಗೆ	ಎ ಖಂಡದ ಅಡಿಯಲ್ಲಿ ವಿಧಿಸಿದ ಶೇಕಡಾವಾರು

	ನೋಂದಣಿ ದಿನಾಂಕದಂದು ಅದರ ವಯಸ್ಸು				ಆಜೀವ ತೆರಿಗೆ
1.	2 ವರ್ಷಗಳನ್ನು ಮೀರಿರದಿದ್ದಲ್ಲಿ	93%	93%	93%	93%
2.	2 ವರ್ಷಗಳು ಮೀರಿದ್ದು ಆದರೆ 3 ವರ್ಷಗಳನ್ನು ಮೀರಿರದಿದ್ದಲ್ಲಿ	87%	87%	87%	87%
3.	3 ವರ್ಷಗಳು ಮೀರಿದ್ದು ಆದರೆ 4 ವರ್ಷಗಳನ್ನು ಮೀರಿರದಿದ್ದಲ್ಲಿ	81%	81%	81%	81%
4.	4 ವರ್ಷಗಳು ಮೀರಿದ್ದು ಆದರೆ 5 ವರ್ಷಗಳನ್ನು ಮೀರಿರದಿದ್ದಲ್ಲಿ	75%	75%	75%	75%
5.	5 ವರ್ಷಗಳು ಮೀರಿದ್ದು ಆದರೆ 6 ವರ್ಷಗಳನ್ನು	69%	69%	69%	69%

	ಮೀರಿರದಿದ್ದಲ್ಲಿ				
6.	,6 ವರ್ಷಗಳು ಮೀರಿದ್ದು ಆದರೆ 7 ವರ್ಷಗಳನ್ನು ಮೀರಿರದಿದ್ದಲ್ಲಿ	64%	64%	64%	64%
7.	7 ವರ್ಷಗಳು ಮೀರಿದ್ದು ಆದರೆ 8 ವರ್ಷಗಳನ್ನು ಮೀರಿರದಿದ್ದಲ್ಲಿ	59%	59%	59%	59%
8.	8 ವರ್ಷಗಳು ಮೀರಿದ್ದು ಆದರೆ 9 ವರ್ಷಗಳನ್ನು ಮೀರಿರದಿದ್ದಲ್ಲಿ	54%	54%	54%	54%
9.	9 ವರ್ಷಗಳು ಮೀರಿದ್ದು ಆದರೆ 10 ವರ್ಷಗಳನ್ನು ಮೀರಿರದಿದ್ದಲ್ಲಿ	49%	49%	49%	49%
10.	·10 ವರ್ಷಗಳು ಮೀರಿದ್ದು ಆದರೆ 11 ವರ್ಷಗಳನ್ನು	45%	45%	45%	45%

	ಮೀರಿರದಿದ್ದಲ್ಲಿ				
11.	11 ವರ್ಷಗಳು ಮೀರಿದ್ದು ಆದರೆ 12 ವರ್ಷಗಳನ್ನು ಮೀರಿರದಿದ್ದಲ್ಲಿ	41%	41%	41%	41%
12.	12 ವರ್ಷಗಳು ಮೀರಿದ್ದು ಆದರೆ 13 ವರ್ಷಗಳನ್ನು ಮೀರಿರದಿದ್ದಲ್ಲಿ	37%	37%	37%	37%
13.	13 ವರ್ಷಗಳು ಮೀರಿದ್ದು ಆದರೆ 14 ವರ್ಷಗಳನ್ನು ಮೀರಿರದಿದ್ದಲ್ಲಿ	33%	33%	33%	33%
14.	14 ವರ್ಷಗಳು ಮೀರಿದ್ದು ಆದರೆ 15 ವರ್ಷಗಳನ್ನು ಮೀರಿರದಿದ್ದಲ್ಲಿ	29%	29%	29%	29%
15	15 ವರ್ಷಗಳನ್ನು ಮೀರಿದ್ದಲ್ಲಿ	25%	25%	25%	25%

ಟಿಪ್ಪಣಿಗಳು:

1. 2009ನೇ ಏಪ್ರಿಲ್ 1ನೇ ದಿನಾಂಕಕ್ಕೆ ಮೊದಲು ಆಜೀವ ತೆರಿಗೆಯು ಬಾಕಿಯಿದ್ದು, ಅದರೆ ಅದನ್ನು ಸಂದಾಯ ಮಾಡದಿದ್ದ ವಾಹನಗಳ ಸಂಬಂಧದಲ್ಲಿ, ಅಂಥ ತೆರಿಗೆಯನ್ನು, ಯಾವುದಾದರೂ ದಂಡವು ಬಾಕಿಯಿದ್ದರೆ, ಅದರ ಸಮೇತವಾಗಿ, ಅಂಥ ದಿನದ ಪೂರ್ವದಲ್ಲಿ ಚಾಲ್ತಿಯಲ್ಲಿದ್ದ ದರಗಳಲ್ಲಿ ಸಂಗ್ರಹಿಸತಕ್ಕದ್ದು.

2. ಒಂದು ಮೋಟಾರು ವಾಹನದ ಸಂಬಂಧದಲ್ಲಿ ವಾಹನದ ಬೆಲೆ ಎಂದರೆ:–

(ಎ) ಭಾರತದಲ್ಲಿ ತಯಾರಾದ ವಾಹನದ ಸಂಬಂಧದಲ್ಲಿ ವಾಹನದ ತಯಾರಕ ಅಥವಾ ವ್ಯಾಪಾರಿ ನೀಡಿದ, ಕರ್ನಾಟಕ ರಾಜ್ಯದಲ್ಲಿ ಸಂದಾಯ ಮಾಡತಕ್ಕ ಅಬಕಾರಿ ಸುಂಕ, ಮಾರಾಟ ತೆರಿಗೆ, ಅಧಿಕರ ಅಥವಾ ಉಪಕರ ಇವುಗಳನ್ನು ಒಳಗೊಂಡ ಖರೀದಿ ಪಟ್ಟಿಯನ್ವಯ ವಾಹನದ ಬೆಲೆ.

(ಬಿ) ಅಮದಾದ ಮೋಟಾರು ವಾಹನದ ಸಂಬಂಧದಲ್ಲಿ, ತಯಾರಾದ ಸ್ಥಳವನ್ನು ಗಣನೆಗೆ ತೆಗೆದುಕೊಳ್ಳದೇ, ಮೋಟಾರನ್ನು ಆಮದು ಮಾಡಿಕೊಳ್ಳುವಾಗ ಆಗುವ ಒಟ್ಟು ಬೆಲೆ, ಎಂದರೆ, ಆಮದು ರಫ್ತು ಸರಕುಗಳ ವಿವರಪಟ್ಟಿ ಅಥವಾ ಅಂಥ ಇತರ ದಾಖಲೆಯಲ್ಲಿ ಹಿಂಬರಹ ಮಾಡಿದಂತೆ ಮತ್ತು ಸೀಮಾಸುಂಕಗಳ ಅಧಿನಿಯಮ, 1962ರಡಿಯಲ್ಲಿ ಹಾಗೆ ಕರನಿರ್ಧರಣೆ ಮಾಡಲಾದ, ವಿಧಿಸಿದ ಸೀಮಾಸುಂಕ, ಮಾಡಿದ ಸಾಗಣೆ ಬಾಡಿಗೆಯ ವೆಚ್ಚಗಳು ಮತ್ತು ಸೀಮಾ ಸುಂಕಗಳ ಇಲಾಖೆಯಿಂದ ಅಥವಾ ಯಾವುದೇ ಇತರ ಇಲಾಖೆಯಿಂದ ವಿಧಿಸಿದ ಹೆಚ್ಚುವರಿ ಸುಂಕ/ದಂಡವು ಇದ್ದಲ್ಲಿ ಅವುಗಳನ್ನು ಒಳಗೊಂಡಂತೆ ವಿಧಿಸಿದ ಇತರ ತೆರಿಗೆಗಳ ಜೊತೆ, ಮೋಟಾರು ವಾಹನದ ಮೌಲ್ಯ.

ಉದ್ದೇಶಗಳು ಮತ್ತು ಕಾರಣಗಳು ಹೇಳಿಕೆ

2009–10ನೇ ವರ್ಷದ ಆಯವ್ಯಯ ಭಾಷಣಕ್ಕೆ ಪರಿಣಾಮ ನೀಡುವ ಉದ್ದೇಶಕ್ಕಾಗಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಆರ್. ಅಶೋಕ್
ಸಾರಿಗೆ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ

ಅನುಬಂಧ

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ 1957ರ (1957ರ ಕರ್ನಾಟಕ ಅಧಿನಿಯಮ 35ರ) ಉದ್ಧೃತ ಭಾಗ

XX XX XX

"ಭಾಗ ಎ1"

[3(1)ನೇ ಪ್ರಕರಣ ನೋಡಿ]

ದ್ವಿಚಕ್ರ ವಾಹನಗಳಿಗೆ ಆಜೀವ ತೆರಿಗೆ

ಕ್ರಮ ಸಂಖ್ಯೆ	ವಾಹನಗಳ ವರ್ಗ	ರೂ.50000ಕ್ಕೆ ಮೀರಿರದ ಬೆಲೆಯ ಮೋಟಾರು ಸೈಕಲ್ಲುಗಳು	ರೂ.50000ಕ್ಕೆ ಮೀರಿದ ಬೆಲೆಯ ಮೋಟಾರು ಸೈಕಲ್ಲುಗಳು
ಎ.	ಹೊಸ ವಾಹನಗಳ ನೋಂದಣಿಯ ಸಮಯದಲ್ಲಿ.	ವಾಹನದ ಬೆಲೆಯ ಶೇಕಡ 8	ವಾಹನದ ಬೆಲೆಯ ಶೇಕಡ 10
ಬಿ.	ವಾಹನವು ಈಗಾಗಲೇ ನೋಂದಣಿಯಾಗಿದ್ದು ಮತ್ತು ನೋಂದಣಿಯ ತಿಂಗಳಿನಿಂದ ಅದರ ವಯಸ್ಸು	ಎ ಖಂಡದಡಿಯಲ್ಲಿ ವಿಧಿಸುವ ಶೇಕಡಾವಾರು ಆಜೀವ ತೆರಿಗೆ	ಎ ಖಂಡದಡಿಯಲ್ಲಿ ವಿಧಿಸುವ ಶೇಕಡಾವಾರು ಆಜೀವ ತೆರಿಗೆ
1.	2 ವರ್ಷಗಳು ಮೀರಿರದಿದ್ದಲ್ಲಿ	93%	93%
2.	2 ವರ್ಷಗಳು ಮೀರಿದ್ದು ಆದರೆ 3 ವರ್ಷಗಳು ಮೀರಿರದಿದ್ದಲ್ಲಿ	87%	87%
3.	3 ವರ್ಷಗಳು ಮೀರಿದ್ದು ಆದರೆ 4 ವರ್ಷಗಳು ಮಿರಿರದಿದ್ದಲ್ಲಿ	81%	81%
4.	4 ವರ್ಷಗಳು ಮೀರಿದ್ದು ಆದರೆ 5 ವರ್ಷಗಳು ಮೀರಿರದಿದ್ದಲ್ಲಿ	75%	75%
5.	5 ವರ್ಷಗಳು ಮೀರಿದ್ದು ಆದರೆ 6 ವರ್ಷಗಳನ್ನು ಮೀರಿರದಿದ್ದಲ್ಲಿ	69%	69%
6.	6 ವರ್ಷಗಳನ್ನು ಮೀರಿದ್ದು ಆದರೆ 7 ವರ್ಷಗಳು ಮೀರಿರದಿದ್ದಲ್ಲಿ	64%	64%
7.	7 ವರ್ಷಗಳು ಮೀರಿದ್ದು	59%	59%

	ಆದರೆ 8 ವರ್ಷಗಳು ಮೀರಿರದಿದ್ದಲ್ಲಿ		
8.	8 ವರ್ಷಗಳು ಮೀರಿದ್ದು ಆದರೆ 9 ವರ್ಷಗಳು ಮಿರಿರದಿದ್ದಲ್ಲಿ	54%	54%
9.	9 ವರ್ಷಗಳು ಮೀರಿದ್ದು ಆದರೆ 10 ವರ್ಷಗಳು ಮೀರಿರದಿದ್ದಲ್ಲಿ	49%	49%

ಟಿಪ್ಪಣಿಗಳು:

1. 2007ನೇ ಏಪ್ರಿಲ್ 1ನೇ ದಿನಾಂಕಕ್ಕೆ ಮೊದಲು ಆಜೀವ ತೆರಿಗೆಯು ಬಾಕಿಯಿದ್ದು, ಆದರೆ ಅದನ್ನು ಸಂದಾಯ ಮಾಡದಿದ್ದ ವಾಹನಗಳ ಸಂಬಂಧದಲ್ಲಿ, ಅಂಥ ತೆರಿಗೆಯನ್ನು, ಯಾವುದಾದರೂ ದಂಡವು ಬಾಕಿಯಿದ್ದರೆ, ಅದರ ಸಮೇತವಾಗಿ, ಅಂಥ ದಿನದ ಪೂರ್ವದಲ್ಲಿ ಚಾಲ್ತಿಯಲ್ಲಿದ್ದ ದರಗಳಲ್ಲಿ ಸಂಗ್ರಹಿಸತಕ್ಕದ್ದು.

2. ಒಂದು ಮೋಟಾರು ವಾಹನದ ಸಂಬಂಧದಲ್ಲಿ ವಾಹನದ ಬೆಲೆ ಎಂದರೆ:–

(ಎ) ಭಾರತದಲ್ಲಿ ತಯಾರಾದ ವಾಹನದ ಸಂಬಂಧದಲ್ಲಿ ವಾಹನದ ತಯಾರಕನಿಂದಾಗಲೀ ಅಥವಾ ವ್ಯಾಪಾರಿಯು ನೀಡಿದ, ಕರ್ನಾಟಕ ರಾಜ್ಯದಲ್ಲಿ ಸಂದಾಯ ಮಾಡತಕ್ಕ ಅಬಕಾರಿ ಸುಂಕ, ಮಾರಾಟ ತೆರಿಗೆ, ಅಧಿಕರ ಅಥವಾ ಉಪಕರ ಇವುಗಳನ್ನು ಒಳಗೊಂಡ ಖರೀದಿ ಪಟ್ಟಿಯನ್ವಯ ವಾಹನದ ಬೆಲೆ.

(ಬಿ) ಆಮದಾದ ಮೋಟಾರು ವಾಹನದ ಸಂಬಂಧದಲ್ಲಿ, ತಯಾರಾದ ಸ್ಥಳವನ್ನು ಗಣನೆಗೆ ತೆಗೆದುಕೊಳ್ಳದೇ, ಮೋಟಾರನ್ನು ಆಮದು ಮಾಡಿಕೊಳ್ಳುವಾಗ ಆಗುವ ಒಟ್ಟು ಬೆಲೆ, ಎಂದರೆ, ಆಮೆದು ರಫ್ತು ಸರಕುಗಳ ವಿವರಪಟ್ಟಿ ಅಥವಾ ಅಂಥ ಇತರ ದಾಖಲೆಯಲ್ಲಿ ಹಿಂಬರಹ ಮಾಡಿದಂತೆ ಮತ್ತು ಸೀಮಾ ಸುಂಕಗಳ ಅಧಿನಿಯಮ, 1962ರಡಿಯಲ್ಲಿ ಹಾಗೆ ಕರನಿರ್ಧರಣೆ ಮಾಡಲಾದ, ವಿಧಿಸಿದ ಸೀಮಾಸುಂಕ, ಮಾಡಿದ ಸಾಗಣೆ ಬಾಡಿಗೆಯ ವೆಚ್ಚಗಳು ಮತ್ತು ಸೀಮಾ ಸುಂಕಗಳ ಇಲಾಖೆಯಿಂದ ಅಥವಾ ಯಾವುದೇ ಇತರೆ ಇಲಾಖೆಯಿಂದ ವಿಧಿಸಿದ ಹೆಚ್ಚುವರಿ ಸುಂಕ/ದಂಡವು ಇದ್ದಲ್ಲಿ ಅವುಗಳನ್ನು ಒಳಗೊಂಡಂತೆ ವಿಧಿಸಿದ ಇತರ ತೆರಿಗೆಗಳ ಜೊತೆ, ಮೋಟಾರು ವಾಹನದ ಮೌಲ್ಯ.

XX XX XX

"ಭಾಗ–ಎ5

[3(1)ನೇ ಪ್ರಕರಣವನ್ನು ನೋಡಿ]

ಮೋಟಾರು ಕಾರುಗಳು, ಜೀಪುಗಳು, ಅಮ್ನಿ ಬಸ್ಸುಗಳು ಮತ್ತು ಖಾಸಗಿರು ಸೇವಾ ವಾಹನಗಳಿಗೆ ಜೀವಾವಧಿ ತೆರಿಗೆ

ಕ್ರಮ ಸಂಖ್ಯೆ	ವಾಹನಗಳ ವರ್ಗ	5 ಚದರ ಮೀಟರುಗಳವರೆಗೆ ನೆಲ ವಿಸ್ತೀರ್ಣ ಹೊಂದಿರುವ ಮತ್ತು 5 ಲಕ್ಷ ರೂಪಾಯಿಗಳ ಬೆಲೆಯನ್ನು ಮೀರದ ಮೋಟಾರು ಕಾರುಗಳು ಜೀಪುಗಳು, ಆಮ್ನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳು	5 ಚದರಮೀಟರುಗಳವರೆಗೆ ನೆಲ ವಿಸ್ತೀರ್ಣ ಹೊಂದಿರುವ ಮತ್ತು 5 ಲಕ್ಷ ರೂಪಾಯಿಗಳನ್ನು ಮೀರಿದ ಆದರೆ 10 ಲಕ್ಷ ರೂಪಾಯಿಗಳನ್ನು ಮೀರದ ಬೆಲೆಯ ಮೋಟಾರು ಕಾರುಗಳು, ಜೀಪುಗಳು, ಆಮ್ನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳು	5 ಚದರ ಮೀಟರುಗಳ ವರೆಗೆ ನೆಲ ವಿಸ್ತೀರ್ಣ ಹೊಂದಿರುವ ಮತ್ತು 10 ಲಕ್ಷ ರೂಪಾಯಿಗಳನ್ನು ಮೀರಿದ ಬೆಲೆಯ ಮೋಟಾರು ಕಾರುಗಳು, ಜೀಪುಗಳು, ಆಮ್ನಿ ಬಸ್ಸುಗಳು ಮತ್ತು ಖಾಸಗಿ ಸೇವಾ ವಾಹನಗಳು
1	2	3	4	5
ಎ	ಹೊಸ ವಾಹನಗಳನ್ನು ನೋಂದಣಿ ಮಾಡುವ ಕಾಲದಲ್ಲಿ	ವಾಹನದ ಬೆಲೆಯ ಶೇ.12	ವಾಹನದ ಬೆಲೆಯ ಶೇ. 13	ವಾಹನದ ಬೆಲೆಯ ಶೇ. 16
ಬಿ	ವಾಹನವನ್ನು ಈಗಾಗಲೇ ನೋಂದಣಿ ಮಾಡಲಾಗಿದ್ದರೆ ಮತ್ತು ನೋಂದಣಿ ಮಾಡಿದ ತಿಂಗಳಿನಿಂದ ಅದರ	ಎ ಖಂಡದಲ್ಲಿ ಅಡಿಯಲ್ಲಿ ವಿಧಿಸಲಾದ ಜೀವಾವಧಿ ತೆರಿಗೆಯ ಶೇಕಡ ಪ್ರಮಾಣ	ಎ ಖಂಡದ ಅಡಿಯಲ್ಲಿ ವಿಧಿಸಲಾದ ಜೀವಾವಧಿ ತೆರಿಗೆಯ ಶೇಕಡ ಪ್ರಮಾಣ	ಎ ಖಂಡದ ಅಡಿಯಲ್ಲಿ ವಿಧಿಸಲಾದ ಜೀವಾವಧಿ ತೆರಿಗೆಯ ಶೇಕಡ ಪ್ರಮಾಣ

	ವಯಸ್ಸು			
1	2 ವರ್ಷಗಳಿಗಿಂತ ಹೆಚ್ಚಾಗಿಲ್ಲದಿದ್ದರೆ	ಶೇ. 93	ಶೇ. 93	ಶೇ. 93
2	2 ವರ್ಷಗಳಿಗಿಂತ ಹೆಚ್ಚಾಗಿದ್ದು ಆದರೆ 3 ವರ್ಷಗಳಿಗಿಂತ ಹೆಚ್ಚಾಗಿಲ್ಲದಿದ್ದರೆ	ಶೇ. 87	ಶೇ. 87	ಶೇ. 87
3	3 ವರ್ಷಗಳಿಗಿಂತ ಹೆಚ್ಚಾಗಿದ್ದು ಆದರೆ 4 ವರ್ಷಗಳಿಗಿಂತ ಹೆಚ್ಚಾಗಿಲ್ಲದಿದ್ದರೆ	ಶೇ. 81	ಶೇ. 81	ಶೇ. 81
4	4 ವರ್ಷಗಳಿಗಿಂತ ಹೆಚ್ಚಾಗಿದ್ದು ಆದರೆ 5 ವರ್ಷಗಳಿಗಿಂತ ಹೆಚ್ಚಾಗಿಲ್ಲದಿದ್ದರೆ	ಶೇ. 75	ಶೇ. 75	ಶೇ. 75
5	5 ವರ್ಷಗಳಿಗಿಂತ ಹೆಚ್ಚಾಗಿದ್ದು ಆದರೆ 6 ವರ್ಷಗಳಿಗಿಂತ ಹೆಚ್ಚಾಗಿಲ್ಲದಿದ್ದರೆ	ಶೇ. 69	ಶೇ. 69	ಶೇ. 69
6	6 ವರ್ಷಗಳಿಗಿಂತ	ಶೇ. 64	ಶೇ. 64	ಶೇ. 64

	ಹೆಚ್ಚಾಗಿದ್ದು ಆದರೆ 7 ವರ್ಷಗಳಿಗಿಂತ ಹೆಚ್ಚಾಗಿಲ್ಲದಿದ್ದರೆ			
7.	7 ವರ್ಷಗಳಿಗಿಂತ ಹೆಚ್ಚಾಗಿದ್ದು ಆದರೆ 8 ವರ್ಷಗಳಿಗಿಂತ ಹೆಚ್ಚಾಗಿಲ್ಲದಿದ್ದರೆ	ಶೇ. 59	ಶೇ. 59	ಶೇ. 59
8.	8 ವರ್ಷಗಳಿಗಿಂತ ಹೆಚ್ಚಾಗಿದ್ದು ಆದರೆ 9 ವರ್ಷಗಳಿಗಿಂತ ಹೆಚ್ಚಾಗಿಲ್ಲದಿದ್ದರೆ	ಶೇ. 54	ಶೇ. 54	ಶೇ. 54
9.	9 ವರ್ಷಗಳಿಗಿಂತ ಹೆಚ್ಚಾಗಿದ್ದು ಆದರೆ 10 ವರ್ಷಗಳಿಗಿಂತ ಹೆಚ್ಚಾಗಿಲ್ಲದಿದ್ದರೆ	ಶೇ. 49	ಶೇ. 49	ಶೇ. 49
10	10 ವರ್ಷಗಳಿಗಿಂತ ಹೆಚ್ಚಾಗಿದ್ದು ಆದರೆ 11 ವರ್ಷಗಳಿಗಿಂತ ಹೆಚ್ಚಾಗಿಲ್ಲದಿದ್ದರೆ	ಶೇ. 45	ಶೇ. 45	ಶೇ. 45
11	11 ವರ್ಷಗಳಿಗಿಂತ	ಶೇ. 41	ಶೇ. 41	ಶೇ. 41

	ಹೆಚ್ಚಾಗಿದ್ದು ಆದರೆ 12 ವರ್ಷಗಳಿಗಿಂತ ಹೆಚ್ಚಾಗಿಲ್ಲದಿದ್ದರೆ			
12	12 ವರ್ಷಗಳಿಗಿಂತ ಹೆಚ್ಚಾಗಿದ್ದು ಆದರೆ 13 ವರ್ಷಗಳಿಗಿಂತ ಹೆಚ್ಚಾಗಿಲ್ಲದಿದ್ದರೆ	ಶೇ. 37	ಶೇ. 37	ಶೇ. 37
13	13 ವರ್ಷಗಳಿಗಿಂತ ಹೆಚ್ಚಾಗಿದ್ದು ಆದರೆ 14 ವರ್ಷಗಳಿಗಿಂತ ಹೆಚ್ಚಾಗಿಲ್ಲದಿದ್ದರೆ	ಶೇ. 33	ಶೇ. 33	ಶೇ. 33
14	14 ವರ್ಷಗಳಿಗಿಂತ ಹೆಚ್ಚಾಗಿದ್ದು ಆದರೆ 15 ವರ್ಷಗಳಿಗಿಂತ ಹೆಚ್ಚಾಗಿಲ್ಲದಿದ್ದರೆ	ಶೇ. 29	ಶೇ. 29	ಶೇ. 29
15	15 ವರ್ಷಗಳಿಗಿಂತ ಹೆಚ್ಚಾಗಿದ್ದರೆ	ಶೇ. 25	ಶೇ. 25	ಶೇ. 25

ಟಿಪ್ಪಣಿ:

1. 2008ರ ಆಗಸ್ಟ್ 1ನೇ ದಿನಾಂಕಕ್ಕೆ ಮುಂಚೆ ಜೀವಾವಧಿ ತೆರಿಗೆ ಬಾಕಿ ಇದ್ದ. ಆದರೆ ಅದನ್ನು ಸಂದಾಯ ಮಾಡದಿರುವ ವಾಹನಗಳಿಗೆ ಸಂಬಂಧಪಟ್ಟಂತೆ, ಅಂಥ ತೆರಿಗೆಯನ್ನು ಅಂಥ ದಿನಕ್ಕೆ ಮುಂಚೆ ಜಾರಿಯಲ್ಲಿದ್ದ ದರಗಳಲ್ಲಿ, ದಂಡ ಯಾವುದಾದರೂ ಬಾಕಿ ಇದ್ದರೆ, ಅದರೊಂದಿಗೆ ವಸೂಲು ಮಾಡತಕ್ಕದ್ದು.
2. ಮೋಟಾರು ವಾಹನಕ್ಕೆ ಸಂಬಂಧಪಟ್ಟಂತೆ ವಾಹನದ ಬೆಲೆ ಎಂದರೆ,–

(ಎ) ಭಾರತದಲ್ಲಿ ತಯಾರಿಸಲಾದ ವಾಹನಕ್ಕೆ ಸಂಬಂಧಪಟ್ಟಂತೆ, ಕರ್ನಾಟಕ ರಾಜ್ಯದಲ್ಲಿ ಸಂದಾಯ ಮಾಡಬೆಕಾಗಿರುವ ಉತ್ಪಾದನಾ ಶುಲ್ಕ, ಮಾರಾಟ ತೆರಿಗೆ, ಮೇಲ್ತೆರಿಗೆ ಅಥವಾ ಉಪಕರ, ಪ್ರವೇಶ ತೆರಿಗೆ, ಮುಂತಾದವೂ ಸೇರಿ ವಾಹನದ ತಯಾರಕ ಅಥವಾ ವ್ಯಾಪಾರಿಯು ನೀಡಿದ ಖರೀದಿ ಬೆಲೆಪಟ್ಟಿಯ ಪ್ರಕಾರ ವಾಹನದ ಬೆಲೆ ; ಮತ್ತು

(ಬಿ) ಆಮದು ಮಾಡಿಕೊಳ್ಳಲಾದ ಮೋಟಾರು ವಾಹನಕ್ಕೆ ಸಂಬಂಧಪಟ್ಟಂತೆ ಅದನ್ನು ಯಾವ ಸ್ಥಳದಲ್ಲಾದರೂ ತಯಾರು ಮಾಡಿರಲಿ, ವಾಹನವನ್ನು ಆಮದು ಮಾಡಿಕೊಳ್ಳುವುದಕ್ಕೆ ಆಗಿರುವ ಒಟ್ಟು ವೆಚ್ಚ, ಎಂದರೆ ಪ್ರದೇಶದ ಬಿಲ್ಲಿನಲ್ಲಿ ಅಥವಾ ಇತರ ದಸ್ತಾವೇಜಿನಲ್ಲಿ ಹಿಂಬರಹ ಮಾಡಿದಂತೆ ಮತ್ತು ಸೀಮಾ ಶುಲ್ಕ ಅಧಿನಿಯಮ, 1962ರ ಅಡಿಯಲ್ಲಿ ಆ ಲೆಕ್ಕದಲ್ಲಿಯೇ ಕರ ನಿರ್ಧರಣೆ ಮಾಡಲಾದ ಮೋಟಾರು ವಾಹನದ ಮೌಲ್ಯ ಮತ್ತು ಅದರ ಮೇಲೆ ವಿಧಿಸಿದ ಸೀಮಾ ಶುಲ್ಕ, ಆಗಿರುವ ಸಾಗಣೆ ವೆಚ್ಚಗಳು ಮತ್ತು ಸೀಮಾಶುಲ್ಕ ಇಲಾಖೆಯು ಅಥವಾ ಇತರ ಯಾವುದೇ ಇಲಾಖೆಯು ವಿಧಿಸಿದ ಹೆಚ್ಚುವರಿ ಶುಲ್ಕ/ದಂಡ ಯಾವುದಾದರೂ ಇದ್ದರೆ ಅದೂ ಸೇರಿದಂತೆ ಅದರ ಮೇಲೆ ವಿಧಿಸಿದ ಇತರ ತೆರಿಗೆಗಳು."

(ಸಿ) ಬಿ ಭಾಗದಲ್ಲಿ.–

(i) 5ನೇ ಬಾಬಿನಲ್ಲಿ, 2ನೇ ಅಂಕಣದಲ್ಲಿನ ನಮೂದುಗಳಿಗೆ ಈ ಕೆಳಕಂಡ ನಮೂದುಗಳನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಬಾಡಿಗೆ ಅಥವಾ ಪ್ರತಿಫಲಕ್ಕಾಗಿ ಓಡಿಸುವ ಮತ್ತು (ಚಾಲಕ ಮತ್ತು ನಿರ್ವಾಹಕ / ಸಹಾಯಕನನ್ನು ಬಿಟ್ಟು) 12ಕ್ಕು ಹೆಚ್ಚು ಪ್ರಯಾಣಿಕರನ್ನು ಒಯ್ಯಲು ನಿರ್ಮಿಸಲಾಧ ಅಥವಾ ಅಳವಡಿಸಲಾದ ಮತ್ತು ಕರ್ನಾಟಕ ಮೋಟಾರು ವಾಹನಗಳ ನಿಯಮಗಳು, 1989ರ 151 (2)ನೇ ನಿಯಮವನ್ನು ಪ್ರತಿಯೊಬ್ಬ ಪ್ರಯಾಣಿಕನ ಸಂಬಂಧದಲ್ಲಿ ಪಾಲಿಸುವ [ಮೋಟಾರು ವಾಹನಗಳ ಅಧಿನಿಯಮ, 1988ರ 88(8)ನೇ ಪ್ರಕರಣದ ಮೇರೆಗೆ ನೀಡಲಾದ ಪರ್ಮಿಟ್ಟಿನಲ್ಲಿ ಒಳಗೊಳ್ಳುವ

ಮೋಟಾರು ವಾಹನಗಳೂ ಸೇರಿದಂತೆ ಕರಾರುವಾಹನಗಳು] ಮೋಟಾರು ವಾಹನಗಳು.

(ii) 6ನೇ ಬಾಬಿನಲ್ಲಿ, (2)ನೇ ಅಂಕಣದಲ್ಲಿರುವ ನಮೂದುಗಳಿಗೆ ಈ ಮುಂದಿನ ನಮೂದುಗಳನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"5ನೇ ಬಾಬಿನ ಅಡಿಯಲ್ಲಿ ಪ್ರತಿಯೊಬ್ಬ ಪ್ರಯಾಣಿಕನ ಸಂಬಂಧದಲ್ಲಿ ತೆರಿಗೆಗೆ ಗುರಿಯಾಗಬೇಕಾದ ವಾಹನಗಳನ್ನು ಹೊರತುಪಡಿಸಿ, ಬಾಡಿಗೆಗಾಗಿ ಅಥವಾ ಪ್ರತಿಫಲಕ್ಕಾಗಿ ಓಡಿಸುವ ಮತ್ತು 12ಕ್ಕೂ ಹೆಚ್ಚು ಪ್ರಯಾಣಿಕರನ್ನು ಒಯ್ಯಲು (ಚಾಲಕ ಮತ್ತು ನಿರ್ವಾಹಕ / ಸಹಾಯಕರನ್ನು ಬಿಟ್ಟು) ನಿರ್ಮಿಸಲಾದ ಅಥವಾ ಅಳವಡಿಸಲಾದ [ಮೋಟಾರು ವಾಹನಗಳ ನಿಯಮಗಳು, 1988ರ 88(8)ನೇ ಪ್ರಕರಣದ ಮೇರೆಗೆ ನೀಡಲಾದ ಪರ್ಮಿಟ್ಟಿನಲ್ಲಿ ಒಳಗೊಳ್ಳುವ ಮೋಟಾರ ವಾಹನಗಳೂ ಸೇರಿದಂತೆ [ಕರಾರು ವಾಹನಗಳು] ಮೋಟಾರು ವಾಹನಗಳು.
– ಪ್ರತಿಯೊಬ್ಬ ಪ್ರಯಾಣಿಕನಿಗೆ."

(ಡಿ) ಭಾಗವನ್ನು ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

(ಇ) ಅನುಸೂಚಿಯ ಕೊನೆಯಲ್ಲಿ ಬರುವ ವಿವರಣೆಯಲ್ಲಿ, (5)ನೇ ಬಾಬನ್ನು ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳನ್ನು ಬಿಟ್ಟು ಬಿಡತಕ್ಕದ್ದು.

ಅನುಬಂಧ – 5

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ
(ಮುಂದುವರೆದ ಉಪವೇಶನಗಳು)

ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2009
(2009ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 22)

ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು (2002ರ ಕರ್ನಾಟಕ ಅಧಿನಿಯಮ 16) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು